ಕರ್ನಾಟಕ ಸರ್ಕಾರ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ
C/o, ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ,
ಬಹು ಮಹಡಿಗಳ ಕಟ್ಟಡ, ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು.
E-mail ID:icpc.kar@gmail.com Phone No: 080-22879381/82/83

ಸಂಖ್ಯೆ:ಐಸಿಪಿಎಸ್/ಐಇಸಿ/ಟಿ.ವಿ–09/2020–21 ದಿನಾಂಕ:05–08–2020

ಜಿಲ್ಲಾ ಮಕ್ಕಳ ರಕ್ಷಣಾ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
ಎಲ್ಲಾ 30 ಜಿಲ್ಲೆಗಳು.

ಮಾನ್ಯರೆ,

ವಿಷಯ: ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿ ನಡೆಸಲ್ಪಡುತ್ತಿರುವ ಸರ್ಕಾರಿ, ಸರ್ಕಾರಿ ಅನುದಾನಿತ ಮತ್ತು ಖಾಸಗಿ ಮಕ್ಕಳ ಪಾಲನಾ ಸಂಸ್ಥೆಗಳಿಗೆ ಪ್ರೊಜೆಕ್ಟರ್ ಹಾಗೂ ಪೂರಕ ಉಪಕರಣಗಳನ್ನು ಖರೀದಿಸುವ ಬಗ್ಗೆ.

ಉಲ್ಲೇಖ: 1) ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮ, 2016
2) ಸರ್ಕಾರದ ಆದೇಶ ಸಂಖ್ಯೆ:ಆಇ 03 TFP 2018 ಬೆಂಗಳೂರು ದಿನಾಂಕ:14.05.2018.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ನಿಯಮ 29(12)(viii)ರಂತೆ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ, 2015ರನ್ವಯ ನೋಂದಣಿಯಾದ ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಗಳು ಕಡ್ಡಾಯವಾಗಿ ಪ್ರೊಜೆಕ್ಟರ್‌ನ್ನು ಖರೀದಿಸಬೇಕಾಗಿರುತ್ತದೆ. ಆದರೆ ಹಲವಾರು ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಇಲ್ಲಿಯವರೆಗೆ ಪ್ರೊಜೆಕ್ಟರನ್ನು ಖರೀದಿಸದೇ ಇರುವುದು ಗಮನಕ್ಕೆ ಬಂದಿರುತ್ತದೆ.

ಕೋವಿಡ್–19 ಸಾಂಕ್ರಾಮಿಕ ರೋಗವು ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಶಾಲೆಗಳನ್ನು ತಾತ್ಕಾಲಿಕವಾಗಿ ಮುಚ್ಚಲಾಗಿದ್ದು, ಆನ್‌ಲೈನ್ ಮೂಲಕ ತರಗತಿಗಳನ್ನು ನಡೆಸುತ್ತಿರುವುದರಿಂದ ಹಾಗೂ ಚಂದನ ವಾಹಿನಿ ಮೂಲಕ ಭೋದನಾ ಕಾರ್ಯಕ್ರಮಗಳನ್ನು ನಡೆಸುತ್ತಿರುವುದರಿಂದ ಸರ್ಕಾರಿ, ಸರ್ಕಾರಿ ಅನುದಾನಿತ ಮತ್ತು ಖಾಸಗಿ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ, ಪ್ರೊಜೆಕ್ಟರ್‌ಗಳನ್ನು ಪೂರಕ ಉಪಕರಣಗಳೊಂದಿಗೆ ಖರೀದಿಸುವುದು ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ಅತ್ಯವಶ್ಯಕವಿರುತ್ತದೆ.

ಆದುದರಿಂದ, ಸರ್ಕಾರಿ, ಸರ್ಕಾರಿ ಅನುದಾನಿತ ಮತ್ತು ಖಾಸಗಿ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ, **ಪ್ರೊಜೆಕ್ಟರ್, ಸ್ಕ್ರೀನ್‌ಗಳನ್ನು Wi-fi ಮತ್ತು bluetooth** ಸಂಪರ್ಕಗಳೊಂದಿಗೆ ಹಾಗೂ **ಹೋಮ್ ಥಿಯೇಟರ್ ಸೌಂಡ್ ಸಿಸ್ಟಮ್‌ಗಳನ್ನು** ತುರ್ತಾಗಿ ಖರೀದಿಸಲು ಸೂಚಿಸಿದೆ. ಒಂದು ವೇಳೆ ಸದರಿ ಉಪಕರಣಗಳು ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಈಗಾಗಲೇ ಲಭ್ಯವಿದ್ದರೆ ಪುನ: ಖರೀದಿಸುವ ಅವಶ್ಯಕತೆ ಇರುವುದಿಲ್ಲ.

- ಎಲ್ಲಾ ಸರ್ಕಾರಿ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಸಿಎಸ್‌ಆರ್ ಅಡಿಯಲ್ಲಿ ತುರ್ತಾಗಿ ನೇರ ಖರೀದಿಗೆ ಯತ್ನಿಸುವುದು. ಇದರಿಂದ ಕೆಟಿಪಿಪಿ ವಿಧಾನದಲ್ಲಾಗುವ ವಿಳಂಬವನ್ನು ತಪ್ಪಿಸಬಹುದು. ಒಂದು ವೇಳೆ ಸಿಎಸ್‌ಆರ್ ಲಭ್ಯವಿಲ್ಲದ ಪಕ್ಷದಲ್ಲಿ ಕೆಟಿಪಿಪಿ ಕಾಯ್ದೆಯ ನಿಯಮಾನುಸಾರ ಖರೀದಿಸಲು ಕಡ್ಡಾಯವಾಗಿ ಅಗತ್ಯ ಕ್ರಮವಹಿಸಿ 10 ದಿನಗಳ ಒಳಗೆ ಅನುಪಾಲನಾ ವರದಿ ಸಲ್ಲಿಸುವುದು.

REDMI NOTE 8
AI QUAD CAMERA

* ಸರ್ಕಾರಿ ಸಂಸ್ಥೆಗಳಾದ ಬಾಲಮಂದಿರ/ವೀಕ್ಷಣಾಲಯಗಳು, ಉಲ್ಲೇಖದ ಸರ್ಕಾರದ ಆದೇಶದಲ್ಲಿ ಪ್ರತ್ಯಾಯೋಜಿಸಲಾದ, ಆರ್ಥಿಕ ಪ್ರತ್ಯಾಧಿಕಾರದ ಕ್ರಮ ಸಂಖ್ಯೆ (13)ರಲ್ಲಿ **Miscelalneous items for hospitals/hostels/child homes/Anganawadis/schools/ANM sub centers etc. (item specifically required by departments should be specified by concurred dept. (Sec condition. No.7) (Rule 55(49) of MCE)** ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ನಿಗಧಿಪಡಿಸಿದಂತೆ ವಾರ್ಷಿಕ ರೂ.50.00ಲಕ್ಷಗಳ ಆರ್ಥಿಕ ಮಿತಿಯೊಳಗೆ ಖರೀದಿಸಲು ಕೆಟಿಪಿಪಿ ಕಾಯ್ದೆಯನುಸಾರ ಅಗತ್ಯ ಕ್ರಮವಹಿಸುವುದು.

* ಸದರಿ ವೆಚ್ಚವನ್ನು ಸರ್ಕಾರಿ ಮಕ್ಕಳ ಪಾಲನಾ ಸಂಸ್ಥೆಗಳು ಲೆಕ್ಕಶೀರ್ಷಿಕೆ:2235–02–102–0–36 ಉಪಶೀರ್ಷಿಕೆ:051 ಸಾಮಾನ್ಯ ವೆಚ್ಚದಡಿ ಭರಿಸಲು ಹಾಗೂ ಸೂಕ್ತ ಲೆಕ್ಕಪತ್ರಗಳನ್ನು ನಿರ್ವಹಿಸಿ ಆಡಿಟ್‌ಗೆ ಒದಗಿಸಲು ಕ್ರಮವಹಿಸತಕ್ಕದ್ದು.

* ಸದರಿ ಪ್ರೊಜೆಕ್ಟರ್‌ಗಳನ್ನು ಖರೀದಿಸುವಾಗ ಉಪಕರಣಗಳು ಅತ್ಯುತ್ತಮ ಗುಣಮಟ್ಟದ್ದಾಗಿದ್ದು, ಮಕ್ಕಳು ತರಗತಿಗಳನ್ನು ಹಗಲು ಬೆಳಕಿನಲ್ಲಿಯೂ ವೀಕ್ಷಿಸಲು ಅನುವಾಗುವಂತೆ ತಾಂತ್ರಿಕ ತಜ್ಞರೊಂದಿಗೆ (ಜಿಲ್ಲೆಯ ಎನ್‌ಐಸಿ, ಇ–ಆಡಳಿತ ಇತ್ಯಾದಿ) ಸಮಾಲೋಚಿಸಿ ಅವರು ಸೂಚಿಸಿದ specificationಗಳೊಂದಿಗೆ ಖರೀದಿಸಲು ಕ್ರಮ ಕೈಗೊಳ್ಳುವುದು.

* ಅನುದಾನಿತ ಮಕ್ಕಳ ಪಾಲನಾ ಸಂಸ್ಥೆಗಳಾದ SAA, Fit Institution, Open Shelter ಗಳು ಸಹಾ ತುರ್ತಾಗಿ 3 ದಿನಗಳ ಒಳಗೆ ಪ್ರೊಜೆಕ್ಟರ್ ಖರೀದಿಸಲು ಕ್ರಮಕೈಗೊಳ್ಳುವುದು. ಒಂದು ವೇಳೆ ಸದರಿ ಸಂಸ್ಥೆಗಳು ಪ್ರೊಜೆಕ್ಟರ್ ಖರೀದಿಸಲು ಕ್ರಮ ಕೈಗೊಳ್ಳದಿದ್ದಲ್ಲಿ ಮಕ್ಕಳನ್ನು ಸೂಕ್ತ ಶೈಕ್ಷಣಿಕ ಸೌಲಭ್ಯದಿಂದ ವಂಚಿತರಾಗಿ ಮಾಡುತ್ತಿರುವುದರಿಂದ ಸದರಿ ಸಂಸ್ಥೆಗಳಿಗೆ ಅನುದಾನವನ್ನು ನಿಲ್ಲಿಸಲಾಗುವುದು ಹಾಗೂ ಅವರ ಸಂಸ್ಥೆಯ ನೋಂದಣಿಯನ್ನು ರದ್ದುಪಡಿಸಲಾಗುವುದೆಂದು ತಿಳಿಸುವುದು.

* ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ–2015ರಡಿ ನೊಂದಾಯಿಸಿದ ಖಾಸಗಿ ಮಕ್ಕಳ ಪಾಲನಾ ಕೇಂದ್ರಗಳು ಸಹಾ ತುರ್ತಾಗಿ 3 ದಿನಗಳ ಒಳಗೆ ಪ್ರೊಜೆಕ್ಟರ್ ಖರೀದಿಸಲು ಕ್ರಮಕೈಗೊಳ್ಳುವುದು. ಒಂದು ವೇಳೆ ಸದರಿ ಸಂಸ್ಥೆಗಳು ಪ್ರೊಜೆಕ್ಟರ್ ಖರೀದಿಸಲು ಕ್ರಮ ಕೈಗೊಳ್ಳದಿದ್ದಲ್ಲಿ ಮಕ್ಕಳನ್ನು ಸೂಕ್ತ ಶೈಕ್ಷಣಿಕ ಸೌಲಭ್ಯದಿಂದ ವಂಚಿತರಾಗಿ ಮಾಡುತ್ತಿರುವುದರಿಂದ ಸದರಿ ಸಂಸ್ಥೆಗಳಿಗೆ ಸಂಸ್ಥೆಯ ನೋಂದಣಿಯನ್ನು ರದ್ದುಪಡಿಸಲಾಗುವುದೆಂದು ತಿಳಿಸುವುದು.

ತಮ್ಮ ವಿಶ್ವಾಸಿ,

05.08.2020

ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು.

ಪ್ರತಿಯನ್ನು:

1. ಅಧೀಕಕ್ಷರು ಬಾಲಮಂದಿರ/ವೀಕ್ಷಣಾಲಯ, ಎಲ್ಲಾ ಜಿಲ್ಲೆಗಳು, ಇವರಿಗೆ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಮುಖ್ಯಸ್ಥರು SAA, Fit Institution, Open Shelter, ಖಾಸಗಿ ಮಕ್ಕಳ ಪಾಲನಾ ಕೇಂದ್ರಗಳು ಇವರಿಗೆ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ (ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಮುಖಾಂತರ)

REDMI NOTE 8
AI QUAD CAMERA